# ಬನ್ನಿ, ದಕ್ಷಿಣೇಶ್ವರಕ್ಕೆ

**ದ**ಕ್ಷಿಣೇಶ್ವರದಲ್ಲೆಲ್ಲ ನಮಗೆ ವಿಶೇಷ ಆಕರ್ಷಣೆಯ ಸ್ಥಳವೆಂದರೆ ಶ್ರೀರಾಮಕೃಷ್ಣರ ಕೊಠಡಿ. ಅದು ಕಾಳೀದೇವಸ್ಥಾನದ ಅಂಗಣದ ವಾಯವ್ಯ ಭಾಗದಲ್ಲಿ, ಕಡೆಯ ಶಿವಮಂದಿರದ ಸ್ವಲ್ಪ ಆಚೆ ಕಡೆ ಇದೆ. ಶ್ರೀರಾಮ ಕೃಷ್ಣರು ದಕ್ಷಿಣೇಶ್ವರದಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ವಾಸವಾಗಿದ್ದರು (೧೮೫೫–೧೮೮೫). ಈ ಕೊಠಡಿಯಲ್ಲಿ ಅವರು ತಮ್ಮ ಜೀವಿತದ ಕಡೆಯ ಭಾಗದಲ್ಲಿ ವಾಸವಾಗಿದ್ದರು. ಅದಕ್ಕೆ ಮೊದಲು ಸುಮಾರು ಹದಿನಾರು ವರ್ಷಗಳ ಕಾಲ ಅವರು ಇನ್ನೊಂದು ಕೊಠಡಿಯಲ್ಲಿ ಇದ್ದರು. ಅದಕ್ಕೂ ನಾವು ಶೀಘ್ರವೇ ಭೇಟಿ ಕೊಡುವವರಿದ್ದೇವೆ. ಈಗ ನಾವು ಇರುವ ಕೊಠಡಿಯು ಶ್ರೀರಾಮಕೃಷ್ಣರ ಭಕ್ತರ ಪಾಲಿಗೆ ಬಹಳ ಮಹತ್ವದ್ದಾಗಿದೆ. ಈ ಕೊಠಡಿಯಲ್ಲಿ ಜನರು ಕುಳಿತುಕೊಂಡು ಧ್ಯಾನ ಮಾಡುತ್ತಿರುವುದನ್ನು ಅಥವಾ ನಿಶ್ಶಬ್ದವಾಗಿ 'ಶ್ರೀರಾಮಕೃಷ್ಣ ವಚನ ವೇದ'ವನ್ನು ಓದುತ್ತಿರುವುದನ್ನು ನೋಡಬಹುದು. ಆ ಗ್ರಂಥದಲ್ಲಿ ಉಲ್ಲೇಖವಾಗಿರುವ ಬಹುಪಾಲು ಸಂಭಾಷಣೆಗಳು ಜರುಗಿದ್ದು ಈ ಕೊಠಡಿಯಲ್ಲಿಯೇ. ಇಲ್ಲಿ ಎರಡು ಮಂಚಗಳಿವೆ. ಶ್ರೀರಾಮಕೃಷ್ಣರು ಸಣ್ಣ ಮಂಚದ ಮೇಲೆ ಕುಳಿತುಕೊಂಡು, ಭಕ್ತರೊಡನೆ ಮಾತುಕತೆಯಾಡುತ್ತಿದ್ದರು. ದೊಡ್ಡ ಮಂಚದ ಮೇಲೆ ಮಲಗಿಕೊಳ್ಳುತ್ತಿದ್ದರು. ಈ ಕೊಠಡಿಯಲ್ಲಿರುವ ಬೇರೆ ವಸ್ತುಗಳು ಆಮೇಲೆ ತಂದಿರಿಸಿದ್ದು.


ಶ್ರೀರಾಮಕೃಷ್ಣರ ಕೊಠಡಿಗೆ ಹೋಗುವ ಮಾರ್ಗ


ಈ ಕೊಠಡಿಯ ಪಶ್ಚಿಮಭಾಗಕ್ಕೆ ಅರ್ಧಚಂದ್ರಾಕಾರದ ಆವರಣವಿದೆ. ಅದು ಗಂಗೆಗೆ ಅಭಿಮುಖವಾಗಿದೆ. ಯುವಕ ನರೇಂದ್ರ (ಮುಂದೆ ಸ್ವಾಮಿ ವಿವೇಕಾನಂದರು) ಮೊದಲ ಬಾರಿಗೆ ಶ್ರೀರಾಮಕೃಷ್ಣರನ್ನು ಭೇಟಿಯಾದಾಗ, ಇದೇ ಅರ್ಧ ಚಂದ್ರಾಕಾರದ ಆವರಣದ ಮೂಲಕ ಕೊಠಡಿಯನ್ನು ಪ್ರವೇಶ ಮಾಡಿದನು. ಈ ಸ್ಥಳದಲ್ಲಿ ನಿಂತುಕೊಂಡು ಶ್ರೀರಾಮಕೃಷ್ಣರು ಗಂಗೆಗೆ ನಮಸ್ಕರಿಸುತ್ತಿದ್ದರು.

ಈ ಅಂಗಣದ ಮುಂಭಾಗದಲ್ಲಿ ಒಂದು ಕಾಲುದಾರಿ ಇದೆ. ಆ ಕಾಲುದಾರಿಯ ಆಚೆ ಒಂದು ದೊಡ್ಡ ಹೂದೋಟ ಇದೆ. ಶ್ರೀರಾಮಕೃಷ್ಣರು ಪೂಜೆಗೆ ಈ ತೋಟದಿಂದಲೇ ಹೂವುಗಳನ್ನು ಕಿತ್ತು ತರುತ್ತಿದ್ದರು.

ಈ ಕೊಠಡಿಯ ಉತ್ತರದ ವರಾಂಡವು ಅಲ್ಲಿ ನಡೆದ ಅನೇಕ ಐತಿಹಾಸಿಕ ಘಟನೆಗಳಿಗೆ ಮೂಕಪ್ರೇಕ್ಷಕನಂತೆ ನಿಂತಿರುವುದು. ಈ ಘಟನೆಗಳು ಸ್ವಾಮಿ ವಿವೇಕಾನಂದರ ಜೀವನಕ್ಕೆ ಸಂಬಂಧಪಟ್ಟವು. ಹಲವಾರು ಪ್ರಸಂಗಗಳಲ್ಲಿ ಶ್ರೀರಾಮಕೃಷ್ಣರು ತಮ್ಮ ಪ್ರಿಯಶಿಷ್ಯನಾದ ನರೇಂದ್ರನನ್ನು ಒಬ್ಬಂಟಿಯಾಗಿ ಅಲ್ಲಿಗೆ ಕರೆದು ಕೊಂಡುಹೋಗಿ, ಅಲ್ಲಿ ಅವನ ಮೇಲೆ ತಮಗಿರುವ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದರು. ಅದಲ್ಲದೆ ಅವನಿಗೆ ಹಲವಾರು ರೀತಿಯ ಆಧ್ಯಾತ್ಮಿಕ ಅನುಭವಗಳನ್ನು ಮಾಡಿಸುತ್ತಿದ್ದರು. ಇದೇ ಸ್ಥಳದಲ್ಲಿ, ಸ್ವಾಮೀಜಿಯ ಮೊದಲ ಭೇಟಿಯ ಸಂದರ್ಭದಲ್ಲಿ, ನಡೆದ ಘಟನೆಯನ್ನು ಅವರ ಮಾತುಗಳಲ್ಲಿಯೇ ಕೇಳೋಣ:

"ಹಾಡನ್ನಂತೂ ಹಾಡಿದೆ. ಇದಾದ ಕೂಡಲೇ ಶ್ರೀರಾಮ ಕೃಷ್ಣರು ಮೇಲೆದ್ದು ನನ್ನ ಕೈಯನ್ನು ಹಿಡಿದುಕೊಂಡು ಅವರ ಕೊಠಡಿಯ ಉತ್ತರಭಾಗದ ವರಾಂಡಕ್ಕೆ ಕರೆದುಕೊಂಡು ಹೋದರು. ಆಗ ಶೀತಕಾಲ. ಉತ್ತರ ದಿಕ್ಕಿನ ಗಾಳಿಯನ್ನು ತಡೆಯಲು ಎರಡು ಕಂಬಗಳ ನಡುವೆ ತಡಿಕೆಯನ್ನು ಕಟ್ಟಿದ್ದರು. ಹೀಗಾಗಿ ವರಾಂಡಕ್ಕೆ ಹೋಗಿ ಬಾಗಿಲನ್ನು ಹಾಕಿಕೊಂಡರೆ ಹೊರಗಿನಿಂದಾಗಲಿ, ಒಳಗಿನಿಂದಾಗಲಿ ಯಾರೂ ನೋಡುವಂತಿರಲಿಲ್ಲ. ವರಾಂಡಕ್ಕೆ ಬಂದ ಕೂಡಲೇ ಶ್ರೀರಾಮಕೃಷ್ಣರು ಬಾಗಿಲನ್ನು ಮುಚ್ಚಿದರು. ಏಕಾಂತದಲ್ಲಿ ಏನೋ ಉಪದೇಶ ನೀಡಬಹುದೆಂದು ನಾನು ಭಾವಿಸಿದೆ. ಆದರೆ ಅವರು ಹೇಳಿದ ಮಾತು ಮತ್ತು ಅವರ ವರ್ತನೆ ಕಲ್ಪನೆಗೂ ಮೀರಿದುದು. ಅವರು ಇದ್ದಕ್ಕಿದ್ದಂತೆ ನನ್ನ ಕೈಗಳನ್ನು ಹಿಡಿದುಕೊಂಡು ಧಾರಾಕಾರವಾಗಿ

ಆನಂದ ಬಾಷ್ಪವನ್ನು ಸುರಿಸಿದರು. ತುಂಬ ಪರಿಚಿತರನ್ನು ಮಾತನಾಡಿಸುವಂತೆ ಪ್ರೀತಿಯಿಂದ ಹೇಳಿದರು: 'ನೀನು ಇಷ್ಟು ತಡವಾಗಿ ಬರುವುದು ಸರಿಯೆ? ನಾನು ನಿನಗಾಗಿ ಕಾಯುತ್ತಿದ್ದೆ ಎಂಬುದನ್ನು ನೀನು ಯೋಚನೆ ಮಾಡಲೇ ಇಲ್ಲವಲ್ಲ. ಪ್ರಾಪಂಚಿಕರ ವ್ಯರ್ಥಾಲಾಪವನ್ನು ಕೇಳಿ ಕೇಳಿ ನನ್ನ ಕಿವಿ ಸುಟ್ಟುಹೋಗುತ್ತಿದೆ, ನನ್ನ ಆಂತರಿಕ ಭಾವನೆಗಳನ್ನು ಯಾರಿಗೂ ಹೇಳಲಾಗದೆ ನಾನು ಒಡೆದು ಹೋಗುವುದರಲ್ಲಿದ್ದೆ.' ಹೀಗೆ ಎಷ್ಟೆಲ್ಲ ಮಾತನಾಡಿದರು ಮತ್ತು ರೋದಿಸಿದರು! ಮರುಕ್ಷಣದಲ್ಲಿಯೇ ನನ್ನ ಮುಂದೆ, ಕೈಜೋಡಿಸಿ ನಿಂತು ನನ್ನನ್ನು ದೇವತೆಯಂತೆ ಸನ್ಮಾನಿಸುತ್ತಾ ಹೇಳಿದರು: 'ಪ್ರಭು, ನೀನು ಯಾರೆಂಬುದು ನನಗೆ ಗೊತ್ತು, ನೀನು ಅದೇ ಪುರಾತನ ಋಷಿ, ನರರೂಪಿ ನಾರಾಯಣ. ಜೀವಿಗಳ ದುರ್ಗತಿಯನ್ನು ನಿವಾರಿಸುವುದಕ್ಕಾಗಿ ಪುನಃ ಶರೀರವನ್ನು ಧರಿಸಿರುವೆ.' "



ಶ್ರೀರಾಮಕೃಷ್ಣರ ಕೊಠಡಿ

"ಅವರ ಆ ರೀತಿಯ ನಡವಳಿಕೆಯನ್ನು ನೋಡಿ ನಾನು ಸ್ತಂಭಿತನಾದೆ. ನಾನು ಯಾರನ್ನು ನೋಡುವುದಕ್ಕೆ ಬಂದಿರುವೆ, ಇವರಂತೂ ಸಂಪೂರ್ಣ ಹುಚ್ಚು ಎಂದು ಮನಸ್ಸಿನಲ್ಲಿಯೇ ಭಾವಿಸಿದೆ. ನಾನಂತೂ ವಿಶ್ವನಾಥ ದತ್ತನ ಮಗ. ಅವರು ನನಗೆ ಹಾಗೆಲ್ಲ ಏಕೆ ಹೇಳಬೇಕು? ಏನೇ ಆಗಲಿ, ನಾನಂತೂ ಸುಮ್ಮನೆ ನಿಂತುಕೊಂಡಿದ್ದೆ, ಈ ಅದ್ಭುತ ಹುಚ್ಚನು ಏನನ್ನು ಹೇಳಬೇಕೋ ಹೇಳಲಿ ಎಂದು. ಸ್ವಲ್ಪ ಹೊತ್ತಿನ ನಂತರ ಅವರು ನನ್ನನ್ನು ಅಲ್ಲಿಯೇ ಇರಲು ಹೇಳಿ ಕೊಠಡಿಯನ್ನು ಪ್ರವೇಶಿಸಿದರು. ಬೆಣ್ಣೆ, ಕಲ್ಲುಸಕ್ಕರೆ ಮತ್ತು ಸ್ವಲ್ಪ ಸಂದೇಶವನ್ನು ತಂದು ಅವುಗಳನ್ನು ತಮ್ಮ ಕೈಗಳಿಂದಲೇ ತಿನ್ನಿಸತೊಡಗಿದರು. 'ನನಗೆ ತಿಂಡಿಯನ್ನು ಕೊಡಿ. ನನ್ನ ಸಂಗಡಿಗರೊಡನೆ ಹಂಚಿಕೊಂಡು ತಿನ್ನುತ್ತೇನೆ' ಎಂದು ನಾನು ಎಷ್ಟೇ ಹೇಳಿದರೂ ಕೇಳಲಿಲ್ಲ. 'ಅವರು ಆಮೇಲೆ ತಿನ್ನಲಿ, ನೀನು ತಿನ್ನು' ಎಂದು ಹೇಳಿ ಎಲ್ಲವನ್ನೂ ನನಗೆ ತಿನ್ನಿಸಿದರು. ಮತ್ತೆ ಕೈಯನ್ನು ಹಿಡಿದು ಹೇಳಿದರು: 'ಹೇಳು, ನೀನು ಬೇಗನೆ ಒಂದು ದಿನ ಏಕಾಕಿಯಾಗಿ ಬರುತ್ತೀಯಾ?' ಅವರು ಅಷ್ಟೊಂದು ಒತ್ತಾಯ ಮಾಡುವುದನ್ನು ಕೇಳಿ ಆಗುವುದಿಲ್ಲ ಎನ್ನಲಾಗದೆ 'ಬರುತ್ತೇನೆ' ಎಂದು ಹೇಳಿದೆ. ಅನಂತರ ಅವರೊಡನೆ ಕೊಠಡಿಯನ್ನು ಪ್ರವೇಶಿಸಿ, ನನ್ನ ಸಂಗಡಿಗರೊಡನೆ ಕುಳಿತುಕೊಂಡೆ."

"ಕುಳಿತುಕೊಂಡು ಅವರನ್ನೇ ನೋಡುತ್ತಾ ಯೋಚಿಸುತ್ತಿದ್ದೆ. ಅವರ ಚಲನವಲನಗಳಲ್ಲಾಗಲಿ, ಇತರರೊಡನೆ ಅವರ ಮಾತುಕತೆ ಆಚರಣೆಯಲ್ಲಾಗಲಿ ಸ್ವಲ್ಪವೂ ಹುಚ್ಚಿನ ಲಕ್ಷಣಗಳಿರಲಿಲ್ಲ. ಅವರ ಆಧ್ಯಾತ್ಮಿಕ ಮಾತುಗಳನ್ನು, ಭಾವಸಮಾಧಿಯನ್ನು ನೋಡಿ ಇವರು ನಿಜವಾಗಿಯೂ ಭಗವಂತನಿಗಾಗಿ ಸರ್ವಸ್ವವನ್ನು ತ್ಯಜಿಸಿರುವರು ಮತ್ತು ಏನು ಹೇಳುತ್ತಿರುವರೊ ಅದನ್ನು ಸ್ವತಃ ಪಾಲಿಸಿರುವರು ಎಂಬುದು ಮನಸ್ಸಿಗೆ ಸ್ಪಷ್ಟವಾಯಿತು. 'ನಿಮ್ಮಗಳನ್ನೆಲ್ಲ ಹೇಗೆ ನೋಡುತ್ತೇನೆಯೊ, ನಿಮ್ಮಗಳೊಡನೆ ಹೇಗೆ ಮಾತನಾಡುತ್ತೇನೆಯೊ, ಹಾಗೆಯೇ ಭಗವಂತನನ್ನು ನೋಡಬಹುದು ಮತ್ತು ಮಾತನಾಡಬಹುದು. ಆದರೆ ಅದು ಯಾರಿಗೆ ಬೇಕಾಗಿದೆ? ಜನರು ಹೆಂಡತಿ ಮಕ್ಕಳ ಶೋಕದಿಂದ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ವಿಷಯವಸ್ತುವಿಗಾಗಿ, ಹಣಕ್ಕಾಗಿ ಕಣ್ಣೀರು ಸುರಿಸುತ್ತಾರೆ. ಆದರೆ ಭಗವಂತನನ್ನು ಕಾಣಲಿಲ್ಲವಲ್ಲ ಎಂದು ಕಣ್ಣೀರು ಸುರಿಸುವವರು ಯಾರು? ಅವನಿಗಾಗಿ ವ್ಯಾಕುಲತೆಯಿಂದ ಕರೆದರೆ ಅವನು ಖಂಡಿತ ದರ್ಶನ ನೀಡುವನು.' ಅವರ ಬಾಯಿಂದ ಈ ಮಾತುಗಳನ್ನು ಕೇಳಿ ಇವರು ಇತರ ಧರ್ಮಪ್ರಚಾರಕರಂತೆ ಕಲ್ಪನೆ ಅಥವಾ ರೂಪಕಗಳ ಸಹಾಯದಿಂದ ಈ ರೀತಿ ಮಾತನಾಡುತ್ತಿಲ್ಲ; ನಿಜವಾಗಿಯೂ ಸರ್ವಸ್ವವನ್ನೂ ತ್ಯಜಿಸಿ, ಸಂಪೂರ್ಣ ಮನಸ್ಸಿನಿಂದ ಭಗವಂತನನ್ನು ಕರೆದು ಮತ್ತು ಅವನ ಪ್ರತ್ಯಕ್ಷ ದರ್ಶನವನ್ನು ಪಡೆದು ಹೀಗೆ ಹೇಳುತ್ತಿರುವರು ಎಂದೆನಿಸಿತು. ಆಗ ಅವರ ಹಿಂದಿನ ವರ್ತನೆಗೂ ಮತ್ತು ಈಗಿನ ಮಾತುಕತೆಗಳಿಗೂ ಸಾಮಂಜಸ್ಯವನ್ನು ಕಾಣಲಾಗಲಿಲ್ಲ. ಆಗ ನನಗೆ ಆಂಗ್ಲ ತತ್ತ್ವಜ್ಞಾನಿಗಳು ತಿಳಿಸಿರುವ ಅರ್ಧೋನ್ಮಾದದ (monomaniac) ವಿಷಯ ಮನಸ್ಸಿಗೆ ಬಂತು. ಇವರೂ ಅದೇ ವರ್ಗಕ್ಕೆ ಸೇರಿರಬಹುದೆಂದು ನಾನಂದುಕೊಂಡೆ. ಮನಸ್ಸಿನಲ್ಲಿ ಹೀಗೆ ನಿಶ್ಚಯಿಸಿದರೂ ಭಗವಂತನಿಗಾಗಿ ಅವರ ಅದ್ಭುತ ತ್ಯಾಗವನ್ನು ಮಾತ್ರ ಮರೆಯಲಾಗಲಿಲ್ಲ. ಹುಚ್ಚರಾದರೂ ಭಗವಂತನಿಗಾಗಿ ಈ ರೀತಿ ತ್ಯಾಗ ಮಾಡುವ ವ್ಯಕ್ತಿಗಳು ಈ ಜಗತ್ತಿನಲ್ಲಿ ಅತ್ಯಂತ ವಿರಳ. ಹುಚ್ಚರಾದರೂ ಇವರು ಮಹಾಪವಿತ್ರರು, ಮಹಾತ್ಯಾಗಿ ಮತ್ತು ಶ್ರದ್ಧೆ, ಪೂಜೆ ಮತ್ತು ಸನ್ಮಾನಕ್ಕೆ ಸಂಪೂರ್ಣ ಅರ್ಹರು ಎಂದು ನಾನು ಭಾವಿಸಿದೆ. ಹೀಗೆ ಭಾವಿಸುತ್ತಾ ಅವರ ಪಾದಕ್ಕೆ ವಂದಿಸಿ ಅವರಿಂದ ಬೀಳ್ಕೊಂಡು ಕೊಲ್ಕತಾಗೆ ಹಿಂದಿರುಗಿದೆ."

(ಮುಂದುವರಿಯುವುದು)